ಅ) ಮನಗಂಡಿದ್ದಲ್ಲಿ, ನೂತನ ಡಿಪೋವನ್ನು ಪ್ರಾರಂಬಿಸುವ ಬಗೆಗಿನ ವಿವರಗಳೇನು;

ಇ) ಬೆಂಗಳೂರು-ಮಂಡ್ಯ, ಮಂಡ್ಯ - ಮೈಸೂರು ನಡುವೆ ಕಾವೇರಿ ಸಾರಿಗೆ ಅಥವಾ ಮಧುರ ಮಂಡ್ಯ ಹೆಸರಿನ ಅಡಿಯಲ್ಲಿ ವಿಶೇಷವಾದ ಸಾರಿಗೆ ಬಸ್ಸಿನ ಸಂಚಾರದ ವ್ಯವಸ್ಥೆ ಪ್ರಾರಂಬಿಸುವ ಪ್ರಸ್ತಾವನೆ ಏನಾದರೂ ಇದೆಯೇ;

ಈ) ಹಾಗೇನಾದರೂ, ಇದ್ದಲ್ಲಿ, ಈ ಸೇವಾ ವ್ಯವಸ್ಥೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ರಮಾನಾಥ ರೈ (ಸಾರಿಗೆ ಸಚಿವರು) :

ಅ) ಹೌದು.

ಆ) ಮಂಡ್ಯ ಜಿಲ್ಲೆಯ ಮಳವಳ್ಳಿ, ಕೆ.ಆರ್.ಪೇಟೆ ಮತ್ತು ನಾಗಮಂಗಲ ತಾಲ್ಲೂಕು ಕೇಂದ್ರಗಳಲ್ಲಿ ಬಸ್ ಡಿಪೋ ಡಿಪೋ ನಿರ್ಮಿಸಲು ಉದ್ದೇಶಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಅಥಣಿ ತಾಲ್ಲೂಕಿನ ಕಾಗವಾಡ ಗಡಿಯಲ್ಲಿ ಅನಧಿಕೃತವಾಗಿ ಹಣ ವಸೂಲಿ ಮಾಡುತ್ತಿರುವುದು

1309 (1622) ಶ್ರೀ ಭರಮಗೌಡ ಅ. ಕಾಗೆ (ಕಾಗವಾಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಅಥಣಿ ತಾಲ್ಲೂಕಿನ ಕಾಗವಾಡ ಗಡಿಯಲ್ಲಿನ ಮಹಾರಾಷ್ಟ್ರದಿಂದ ಕರ್ನಾಟಕದ ಚಿಂಚಲಿ, ಕೋಟಕನೂರು ಮತ್ತು ಮಂಗಸೂಳಿ ಸುಕ್ಷೇತ್ರಗಳಿಗೆ ಹಾಗೂ ಇನ್ನಿತರೆ ಪ್ರದೇಶಗಳಿಗೆ ಹೋಗುವ ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ಅನಧಿಕೃತವಾಗಿ ಆರ್.ಟಿ.ಓ. ಅಂತಾ ಹೇಳಿಕೊಂಡು ಕಾನೂನು ಬಾಹಿರವಾಗಿ ಹಣ ವಸೂಲಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಅಂತಹವರ ವಿರುದ್ಧ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಇಲ್ಲ. ಆದರೆ, ಈ ಬಗ್ಗೆ ದಿನಾಂಕ: 17.02.2003ರ ವಿಜಯ ಕರ್ನಾಟಕ ಹಾಗೂ ಸಂಯುಕ್ತ ಕರ್ನಾಟಕ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ಅಂಶವನ್ನು ಗಮನಿಸಿ, ಈ ಬಗ್ಗೆ ಸಾರ್ವಜನಿಕರಿಗೆ ಇಂತಹ ಪ್ರಕರಣ ಸತ್ಯಕ್ಕೆ ದೂರವಾಗಿದೆ. ಅಂತಹ ಸನ್ನಿವೇಶಗಳು ಕಂಡುಬಂದಲ್ಲಿ ಪೋಲೀಸ್ ಠಾಣೆಗೆ ಕೂಡಲೇ ದೂರು ನೀಡುವಂತೆ ಸ್ಪಷ್ಟೀಕರಣ ನೀಡಲಾಗಿದೆ.

ಆ) ಮೇಲಿನ ಉತ್ತರ ಅನ್ವಯಿಸುತ್ತದೆ.

ಪಿರಿಯಾಪಟ್ಟಣ ತಾಲ್ಲೂಕಿನ ಕಣಗಾಲು ಗ್ರಾಮದಲ್ಲಿ ಔಟ್ ಪೋಸ್ಟ್ ಪೋಲೀಸ್ ಉಪಠಾಣೆ ತೆರೆಯುವುದು

1310 (931) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರದಲ್ಲಿ ಹಿಂದೆ ಔಟ್‌ಪೋಸ್ಟ್ ಪೋಲೀಸ್ ಉಪಠಾಣೆ ಇದ್ದು ಅದನ್ನು ಮೇಲ್ದರ್ಜೆಗೇರಿಸಲಾದ ಪರಿಣಾಮವಾಗಿ ಈ ಔಟ್ ಪೋಸ್ಟ್